ಅಧ್ಯಕ್ಷರು : ಮಾನ್ಯ ಸಚಿವರು ಆ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

ಈ) : 1987-88 ರಿಂದ 94ರ ವರೆಗೆ ಪ್ರಾರಂಭವಾದ ಸಂಸ್ಕೃತ ಪಾಠಶಾಲೆಗಳಿಗೆ ಅನುದಾನ.

ಅಧ್ಯಕ್ಷರು : ಮಾನ್ಯ ಗೋವಿಂದೇಗೌಡರು ನನ್ನ ಅನುಮತಿ ಪಡೆದು ಸದನಕ್ಕೆ ಗೈರು ಹಾಜರಾಗಿದ್ದಾರೆ. ಆದರೂ ಪರವಾಗಿಲ್ಲ, ಮಾನ್ಯ ಅಂಬಕಗಟ್ಟಿಯವರು ತಮ್ಮ ವಿಷಯ ಪ್ರಸ್ತಾವಿಸಿ.

ಶ್ರೀ ಶ್ರೀಕಾಂತ ಅಂಬರಗಟ್ಟಿ (ಧಾರವಾಡ ಗ್ರಾಮಾಂತರ) : ಮಾನ್ಯ ಅಧ್ಯಕ್ಷರೇ, ಸರ್ಕಾರವು 1993-94ರ ಸಾಲಿನ ನಂತರ ಪ್ರಾರಂಭವಾದ ಸಂಸ್ಕೃತ ಪಾಠಶಾಲೆಗಳಿಗೆ ಅನುದಾನ ನೀಡುತ್ತಿದೆ. ಆದರೆ 1987-88 ರಿಂದ 94ರವರೆಗೆ ಪ್ರಾರಂಭವಾದಂಥ ಸುಮಾರು 90 ಸಂಸ್ಕೃತ ಪಾಠಶಾಲೆಗಳಿಗೆ ಅನುದಾನವನ್ನು ಕೊಡುತ್ತಿಲ್ಲ. ಸಂಸ್ಕೃತ ಪಾಠಶಾಲೆಗಳಲ್ಲಿ ಎಲ್ಲಿ ಅನುದಾನ ಇಲ್ಲವೋ ಅಂತಹ ಪಾಠಶಾಲೆಗಳಲ್ಲಿ ಫೀ ಸಂಗ್ರಹಿಸಲಿಕ್ಕೆ ಕೂಡ ಅವಕಾಶ ಇಲ್ಲದಂತಾಗಿದೆ. ಎಲ್ಲೆಲ್ಲಿ ಬೇಡಿಕೆ ಇರುತ್ತದೆಯೋ ಅಲ್ಲಿ ಬೇರೆ ಬೇರೆ ಪಾಠಶಾಲೆಗಳನ್ನು ಸರ್ಕಾರ ಪ್ರಾರಂಭ ಮಾಡುತ್ತದೆ. ಆದರೆ ಸಂಸ್ಕೃತ ಪಾಠಶಾಲೆಗಳನ್ನು ಇವತ್ತು ಖಾಸಗಿ ಆಡಳಿತ ಮಂಡಳಿಗಳವರೇ ನಡೆಸುತ್ತಿದ್ದಾರೆ. ಸಂಸ್ಕೃತ ನಮ್ಮ ಪುರಾತನ ಭಾಷೆ, ಭಾರತೀಯ ಸನಾತನ ಸಂಸ್ಕೃತಿಯ ಸಂಪತ್ತಿನ ಪ್ರತೀಕವಾಗಿರುವಂತಹ ಈ ಭಾಷೆಯನ್ನು ಉಳಿಸಬೇಕು, ಬೆಳೆಸಬೇಕು ಎಂದು ವಿಶ್ವ ಮಟ್ಟದ ಸಂಸ್ಕೃತ ಪಾಠಶಾಲೆಗಳನ್ನೂ ಕೂಡ ಅನುದಾನಕ್ಕೆ ಒಳಪಡಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಪಡಿಸುತ್ತೇನೆ. ನನಗೆ ತಿಳಿದ ಮಟ್ಟಿಗೆ ಈ ಸಂಸ್ಕೃತಿ ಭಾಷೆಯ ಅಭಿವೃದ್ಧಿಗಾಗಿ ಇಟ್ಟಂತಹ ಅನುದಾನದಲ್ಲಿ ಸಂಪೂರ್ಣವಾದ ಹಣ ಬಳಕೆಯಾಗದೇ ಲ್ಯಾಪ್ಸ್ ಆಗಿರುವಂತಹದ್ದು ಕಂಡು ಬಂದಿದೆ. ಅದಕ್ಕಾಗಿ ಈ ಒಂದು ಸನಾತನ ಸಂಸ್ಕೃತಿಯ ಪ್ರತೀಕವಾದ ಭಾಷೆಯ ಎಲ್ಲಾ ಶಾಲೆಗಳನ್ನು ದಯವಿಟ್ಟು ಅನುದಾನಕ್ಕೆ ಒಳಪಡಿಸಬೇಕೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 1994ನೇ ಇಸವಿಯಿಂದ ಶುರುವಾದಂತಹ ಶಾಲೆಗಳಿಗೆ ಅನುದಾನವನ್ನು ಕೊಡುತ್ತಿದ್ದಾರೆ. 1997-88 ರಿಂದ 1994ರ ಮಧ್ಯದಲ್ಲಿ ಇರತಕ್ಕಂತಹ ಸಂಸ್ಕೃತ ಪಾಠ ಶಾಲೆಗಳಿಗೆ ಅನುದಾನವನ್ನು ಕೊಡುತ್ತಿಲ್ಲ ಎನ್ನುವಂತಹ ವಿಚಾರವನ್ನು ಮಾನ್ಯ ಸದಸ್ಯರು ಇಲ್ಲಿ ಪ್ರಸ್ತಾಪಿಸಿದ್ದಾರೆ. ಈ ವಿಚಾರವನ್ನು ನಾನು ಮಾನ್ಯ ಶಿಕ್ಷಣ ಸಚಿವರ ಗಮನಕ್ಕೆ ತಂದು ಅವರಿಂದ ಒಂದು ಹೇಳಿಕೆಯನ್ನು ಸದನದಲ್ಲಿ ಕೊಡಿಸುತ್ತೇನೆ ಎಂದು ಭರವಸೆ ನೀಡುತ್ತೇನೆ.

ಉ) : ರಾಜ್ಯದಲ್ಲಿ ಬಗರ್‌ಹುಕುಂ ಸಾಗುವಳಿ ಖಾಯಂ ಮಾಡುವುದು

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೇ, ಸುಮಾರು 15-20 ವರ್ಷಗಳಿಂದ ಬಡವರು ಇಡೀ ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದಾರೆ. ಆದರೆ ನಗರಸಭೆ ಬೆಳೆದಂತೆಲ್ಲಾ ಈಗ 5 ಕಿ. ಮೀ. ವ್ಯಾಪ್ತಿಯೊಳಗೆ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವಂತಹ ಬಡವರಿಗೆ ಅದನ್ನು ಖಾಯಂ ಮಾಡುವುದಕ್ಕಾಗುವುದಿಲ್ಲ ಎನ್ನುವಂತಹ